ಹ್ಯಾಮಿಲ್ಟನ್, ಕಾರಿನಲ್ಲಿ ಮನೆಗೆ ಸಾಗುವಾಗ ಬಾಲ್ಯದ ಕನಸುಗಳನ್ನು ನೆನಪಿಸಿಕೊಂಡರು.

'ನಾನು ಹುಡುಗನಾಗಿದ್ದಾಗ ಫಾರ್ಮುಲಾ ಒನ್ ರೇಸ್ ನೋಡುತ್ತಿದ್ದೆ. ನಾನು ಅಲ್ಲಿಗೆ ಹೋಗುವುದು ಯಾವಾಗ ಎಂದುಕೊಳ್ಳುತ್ತಿದ್ದೆ. ಕಂಡ ಕನಸನ್ನು ಹೀಗೆ ನನಸಾಗಿಸಿಕೊಳ್ಳುವ ಸುಖ ಬಣ್ಣಿಸಲಸದಳ. ಮಕ್ಕಳೆಲ್ಲ ದೊಡ್ಡ ಕನಸುಗಳನ್ನು ಕಾಣಬೇಕು. ಅದನ್ನು ಈಡೇರಿಸಿಕೊಳ್ಳಲು ಹೋರಾಡಬೇಕು. ಹಾದಿಯಲ್ಲಿ ಬರುವ ಎಡರುಗಳನ್ನೆಲ್ಲ ಮೀರಬೇಕು. ಗೆದ್ದು ಬೀಗಬೇಕು' ಎಂಬ ಅವರ ನುಡಿಯಲ್ಲಿ ಎಂಥ ಜೀವನಪ್ರೀತಿ ಇದೆಯಲ್ಲವೇ?

ಹ್ಯಾಮಿಲ್ಟನ್ ಅಪ್ಪ ಆಂಥನಿ ಹ್ಯಾಮಿಲ್ಟನ್ ಕಪ್ಪು ಬ್ರಿಟಿಷ್. ಅಮ್ಮ ಕಾರ್ಮೆನ್ ಬಿಳಿ ಬ್ರಿಟಿಷ್. ಹೀಗಾಗಿ ಹ್ಯಾಮಿಲ್ಟನ್ ಮಿಶ್ರ ವರ್ಣದ ಯುವಕ. ಒದ್ದೆ ನೆಲದ ಮೇಲೂ ಸ್ಪರ್ಧಿಗಳನ್ನು ಹಿಂದಿಕ್ಕಿ ಅನೇಕ ಬಾರಿ ಗೆಲುವಿನ ಸವಿ ಉಂಡ ಸಾಧಕ.

ಅಪ್ಪ–ಅಮ್ಮ ಪ್ರತ್ಯೇಕವಾಗಿ ಬದುಕಲು ನಿರ್ಧರಿಸಿದಾಗ ಹ್ಯಾಮಿಲ್ಟನ್ ಇನ್ನೂ ಎರಡು ವರ್ಷದ ಮಗು. ಸ್ವತಂತ್ರವಾಗಿ ನಡೆಯುವ ಹೊತ್ತಿಗೆ ಮತ್ತೆ ಅಪ್ಪನ ಪ್ರೀತಿ ಸಿಕ್ಕಿತು. ಮಾಹಿತಿ ತಂತ್ರಜ್ಞಾನ ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದ ಆಂಥನಿ 1991ರಲ್ಲಿ ರೇಡಿಯೊ ನಿಯಂತ್ರಣವಿರುವ ಕಾರನ್ನು ಹ್ಯಾಮಿಲ್ಟನ್‌ಗೆ ತಂದುಕೊಟ್ಟರು. ಅದರಲ್ಲಿ ರೇಸ್ ಆಡುವ ಗೀಳಿಗೆ ಮಗ ಬಿದ್ದಮೇಲೆ ಅಪ್ಪನ ಬದುಕೂ ಬದಲಾಗಬೇಕಾಯಿತು. ರಾಷ್ಟ್ರೀಯ 'ಬಿಆರ್‌ಸಿಎ ಚಾಂಪಿಯನ್‌ಷಿಪ್'ನಲ್ಲಿ ಹ್ಯಾಮಿಲ್ಟನ್ ಎರಡನೆಯವನಾಗಿ ರೇಸ್ ಪೂರೈಸಿದ ಮೇಲೆ ಅಪ್ಪನಿಗೆ ಅದರ ಗಂಭೀರತೆ ಗೊತ್ತಾಗಿಬಿಟ್ಟಿತು. ಆರು ವರ್ಷದ ಮಗನಿಗೆ ಗೋ–ಕಾರ್ಟ್ ತಂದುಕೊಟ್ಟರು. ಆಮೇಲಂತೂ ಹ್ಯಾಮಿಲ್ಟನ್‌ಗೂ ರೇಸ್‌ಗೂ ಸಂದಿದ್ದು ಸಾವಯವ ಸಂಬಂಧ.

ಶಾಲೆಯಲ್ಲಿ ಚೆನ್ನಾಗಿ ಓದಿದರೆ ರೇಸಿಂಗ್ ಬದುಕು ಕಟ್ಟಿಕೊಳ್ಳಲು ಏನು ಬೇಕೋ ಎಲ್ಲವನ್ನೂ ಒದಗಿಸುವುದಾಗಿ ಅಪ್ಪ ಭರವಸೆ ಕೊಟ್ಟರು. ಮಗನಿಗೆ ಅಷ್ಟು ಸಾಕಾಯಿತು. ಫಾರ್ಮುಲಾ ಒನ್ ರೇಸರ್ ಆಗುವುದೆಂದರೆ ದುಬಾರಿ ಬಾಬತ್ತು. ಅದಕ್ಕೆ ದೊಡ್ಡ ಮೊತ್ತದ ಹಣ ಬೇಕು. ಅಪ್ಪ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕೆಲಸ ಬಿಟ್ಟು ಗುತ್ತಿಗೆದಾರರಾದರು. ಮಗನ ವೃತ್ತಿಬದುಕು ರೂಪಿಸಲು ಬೇಕಿದ್ದ ಹಣ ಹೊಂದಿಸಲಿಕ್ಕೆ ಅವರು ಆಯ್ಕೆ ಮಾಡಿಕೊಂಡ ಅನಿವಾರ್ಯ ದಾರಿ ಅದು. ಕೆಲವೊಮ್ಮೆ ಅವರು ಏಕಕಾಲದಲ್ಲಿ ಮೂರು ಮೂರು ಕೆಲಸಗಳನ್ನು ಮಾಡಿ ಸಂಪಾದಿಸಿದ್ದೂ ಇದೆ. 1995ರ ಡಿಸೆಂಬರ್‌ನಲ್ಲಿ ಹ್ಯಾಮಿಲ್ಟನ್ ಖುದ್ದು ನಡೆದುಹೋಗಿ ಮೆಕ್‌ಲಾರೆನ್ ತಂಡದ ಪ್ರಿನ್ಸಿಪಲ್ ರಾನ್ ಡೆನ್ನಿಸ್ ಎದುರು ನಿಂತಿದ್ದ. ಹತ್ತು ವರ್ಷದ ಹುಡುಗ ಆಟೊ ಸ್ಪೋರ್ಟ್ಸ್ ಪ್ರಶಸ್ತಿ ಸಮಾರಂಭದಲ್ಲಿ ಹಾಗೆ ಎದೆಯುಬ್ಬಿಸಿ ನಿಂತದ್ದನ್ನು ನೋಡಿ ರಾನ್ ದಂಗಾದರು. 'ನಾನು ಮುಂದೆ ಒಂದು ದಿನ ನಿಮ್ಮ ಕಂಪನಿಯ ರೇಸರ್ ಆಗಬೇಕೆಂದಿರುವೆ. ಆಗಿ ತೋರಿಸುವೆ... ನೋಡುತ್ತಿರಿ' ಎಂದು ಹುಡುಗ ಹೇಳಿದಾಗ ರಾನ್ ನಿರುತ್ತರರಾಗಿದ್ದರು.

ಅದಾಗಿ ಮೂರೇ ವರ್ಷಗಳಲ್ಲಿ ಮರ್ಸಿಡೀಸ್ ಬೆಂಜ್ ಹಾಗೂ ಮೆಕ್‌ಲಾರೆನ್ಸ್ ಕಂಪನಿಗಳು ಯುವ ಚಾಲಕರಿಗೆ ನೆರವು ನೀಡುವ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಿದವು. ಮುಂದೆ ಬೆಳೆಸಬೇಕು ಎಂದು ಅವು ಆಯ್ಕೆ ಮಾಡಿಕೊಂಡಿದ್ದ ಚಾಲಕರ ಪಟ್ಟಿಯಲ್ಲಿ ಪ್ರೌಢವಯಸ್ಕ ಹ್ಯಾಮಿಲ್ಟನ್ ಹೆಸರೂ ಇತ್ತು.

2008ರಲ್ಲಿ ಬ್ರೆಜಿಲ್ ಗ್ರ್ಯಾನ್ ಪ್ರಿ ರೇಸ್‌ನಲ್ಲಿ ಹ್ಯಾಮಿಲ್ಟನ್ ಗಮನ ಸೆಳೆಯುವ ಹೊತ್ತಿಗೆ ಅವರ ತಂದೆ ಎರಡೆರಡು ಜವಾಬ್ದಾರಿ ಹೊತ್ತಿದ್ದರು. ಒಂದು ಕಡೆ ತಮ್ಮದೇ ಕಂಪ್ಯೂಟರ್ ಉದ್ದಿಮೆ. ಇನ್ನೊಂದು ಕಡೆ ಮಗನ ವ್ಯವಸ್ಥಾಪಕನ ಕೆಲಸ. ಮಗ 2010ರಲ್ಲಿ ಅಪ್ಪನ ನೆರಳಿನಿಂದ ಸಂಪೂರ್ಣ ಹೊರಬಂದಿದ್ದು ವೃತ್ತಿಪರತೆಯ ಇನ್ನೊಂದು ತಿರುವು. 2007ರಲ್ಲಿ ಮೆಕ್‌ಲಾರೆನ್ಸ್ ತಂಡದ ಪರವಾಗಿ ರೇಸ್ ಕಣಕ್ಕೆ ಹ್ಯಾಮಿಲ್ಟನ್ ಇಳಿದಾಗ ಅನೇಕರು



**ಹ್ಯಾಮಿಲ್ಟನ್ ಅಪ್ಪ ಆಂಥನಿ ಹ್ಯಾಮಿಲ್ಟನ್ ಕಪ್ಪು ಬ್ರಿಟಿಷ್. ಅಮ್ಮ ಕಾರ್ಮೆನ್ ಬಿಳಿ ಬ್ರಿಟಿಷ್. ಹೀಗಾಗಿ ಹ್ಯಾಮಿಲ್ಟನ್ ಮಿಶ್ರ ವರ್ಣದ ಯುವಕ. ಒದ್ದೆ ನೆಲದ ಮೇಲೂ ಸ್ಪರ್ಧಿಗಳನ್ನು ಹಿಂದಿಕ್ಕಿ ಅನೇಕ ಬಾರಿ ಗೆಲುವಿನ ಸವಿ ಉಂಡ ಸಾಧಕ.**